ಸುದ್ದಿ ಸಿಂಚನ

ಉಚಿತ ಯುಜಿಡಿ ಸಂಪರ್ಕ ಅರ್ಹರಿಂದ ಅರ್ಜಿ ಆಹ್ವಾನ

ರಾಯಚೂರು: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ ಹಂತ 4ರಡಿ ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಉಚಿತ ಯುಜಿಡಿ ಮನೆ ಸಂಪರ್ಕ ಕಲ್ಪಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಆಸಕ್ತರು ಜಾತಿ ಪ್ರಮಾಣ ಪತ್ರ, ಆಸ್ತಿ ಮಾಲೀಕತ್ವ ದಾಖಲಾತಿ / ಖಾತೆ / ಪಹಣಿ / ನೋಂದಣಿ ದಾಖಲೆ, ಆಧಾರ್ ಕಾರ್ಡ್ ಪ್ರತಿ, ಸಲ್ಲಿಸಲಾದ ದಾಖಲೆಗಳು ನಿಜವಾಗಿದ್ದು, ತಪ್ಪು ಮಾಹಿತಿ ನೀಡಿಲ್ಲ ಎಂಬುದಾಗಿ ನೋಟರಿ ಅಫಿಡೆವಿಟ್‌ದೊಂದಿಗೆ ಜೂನ್ 15ರೊಳಗಾಗಿ ಪಾಲಿಕೆಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಭೀಮಾಶಂಕರ ಮೊಬೈಲ್ ಸಂ:80761 65543 ಅಥವಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಜೈಪಾಲರೆಡ್ಡಿ (7989813605) ಗೆ ಸಂಪರ್ಕ ಮಾಡಬಹುದು ಎಂದು ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರೆಗುಡ್ಡಕ್ಕೆ ಸಮರ್ಪಕ ಬಸ್ ಸಂಚಾರಕ್ಕೆ ಮನವಿ

ಮಾನ್ವಿ: ತಾಲೂಕಿನ ಕರೆಗುಡ್ಡ ಗ್ರಾಮಕ್ಕೆ ಸಮರ್ಪಕವಾಗಿ ಬಸ್ಗಳ ಸಂಚಾರಕ್ಕೆ ಕ್ರಮ ವಹಿಸಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಘಟಕದಿಂದ ಪಟ್ಟಣದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಘಟಕದಲ್ಲಿ ಸಾರಿಗೆ ಘಟಕದ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು. ಶೈಕ್ಷಣಿಕ ಮಾಸ ಪ್ರಾರಂಭವಾಗಿರುವುದರಿಂದ ತಾಲೂಕಿನ ವಿವಿಧ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಿತ್ಯ ತಮ್ಮ ಗ್ರಾಮಗಳಿಂದ ಮಾನ್ವಿ ಪಟ್ಟಣಕ್ಕೆ ವಿದ್ಯಾಭ್ಯಾಸಕ್ಕಾಗಿ ಶಾಲಾ ಕಾಲೇಜುಗಳಿಗೆ ಆಗಮಿಸುತ್ತಾರೆ. ಶಾಲಾ ಅವಧಿಯ ನಂತರ ಮರಳಿ ಗ್ರಾಮಗಳಿಗೆ ತೆರಳುವುದಕ್ಕೆ ಅನುಕೂಲವಾಗುವಂತೆ ಬಸ್‌ಗಳ ವ್ಯವಸ್ಥೆ ಮಾಡಬೇಕು ಹಾಗೂ ಕರೆಗುಡ್ಡ ಗ್ರಾಮದ ವಿದ್ಯಾರ್ಥಿ ಗಳಿಗೆ ಅನುಕೂಲವಾಗುವಂತೆ ಮಾನ್ವಿ ಬಸ್ ನಿಲ್ದಾಣದಿಂದ ಪ್ರತಿದಿನ ಮಧ್ಯಾಹ್ನ 1.30ಕ್ಕೆ ಬಸ್ ಬಿಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭ ದಲ್ಲಿ ಘಟಕದ ಬಂಡೆಗುರು,ಪಿರಬಾಷ, ಮಹಾಂತೇಶ್, ಪುನೀತ್, ನಿಂಗಯ್ಯ, ಬಸವರಾಜ ಇದ್ದರು.

ತೋರಣದಿನ್ನಿ ಆಸ್ಪತ್ರೆಯಲ್ಲಿ ವಿದ್ಯುತ್ ಶಾರ್ಟ್‌ಸರ್ಕ್ಯೂಟ್

ಕವಿತಾಳ: ಸಮೀಪದ ತೋರಣದಿನ್ನಿ ಸರ್ಕಾರಿ ಆಸ್ಪತ್ರೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.ವೈದ್ಯರು ರೋಗಿಗಳನ್ನು ತಪಾಸಣೆ ಮಾಡುವ ವೇಳೆ ಗೋಡೆಯಲ್ಲಿ ಹಾಕಿದ್ದ ಫ್ಯಾನ್ ಇದ್ದಕ್ಕಿದ್ದಂತೆ ಸ್ಫೋಟಿಸಿ ವೈದ್ಯರ ಕೊಠಡಿಯಲ್ಲಿ ಬೆಂಕಿ ಆವರಿಸಿದೆ ಬೆಂಕಿಯ ಕಿಡಿ ಬಿದ್ದು ವೈದ್ಯರ ಚೇರ್‌ಸಂಪೂರ್ಣ ಸುಟ್ಟು ಕರಕಲಾಗಿದೆ. ಬೇಸಿಗೆ ಬಿಸಿಲಿನ ಹಿನ್ನೆಲೆಯಲ್ಲಿ ಕುಷನ್ ಹೊಂದಿದ ಚೇರ್‌ನಲ್ಲಿ ಕೂಡದೇ ಪಕ್ಕದಲ್ಲಿ ಇನ್ನೊಂದು ಚೇರ್‌ನಲ್ಲಿ ಕುಳಿತು ರೋಗಿಗಳನ್ನು ತಪಾಸಣೆ ಮಾಡುತ್ತಿದ್ದೆ, ಈ ಸಂದರ್ಭ ದಲ್ಲಿ ಈಗಾಗಲೇ ಕೆಟ್ಟು ನಿಂತಿದ್ದ ಫ್ಯಾನ್ ಸ್ಫೋಟಿಸಿ ಬೆಂಕಿ ಆವರಿಸಿತು. ತಕ್ಷಣ ರೋಗಿಗಳನ್ನು ಹೊರಗೆ ಕಳುಹಿಸಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಯಿತು ಎಂದು ಡಾ.ಪಿ.ಬಿ.ಸಿಂಗ್ ಪ್ರತಿಕ್ರಿಯಿಸಿದರು.

ರೈಲುಗಾಡಿಗೆ ಸಿಲುಕಿ ವ್ಯಕ್ತಿ ಸಾವು; ಪೊಲೀಸ್ ತನಿಖೆ

ರಾಯಚೂರು: ಲಿಂಗೇರಿ ಮತ್ತು ಸೈದಾಪೂರ ರೈಲು ನಿಲ್ದಾಣಗಳ ಮದ್ಯೆದ ರೈಲುಹಳಿಯಲ್ಲಿ ಕಳೆದ ಮೇ 31 ರಂದು ಅಪರಿಚಿತ ಗಂಡಸು ರೈಲುಹಳ್ಳಿಗಳನ್ನು ದಾಟು ತ್ತಿರುವಾಗ ಯಾವುದೋ ಚಲಿಸುವ ರೈಲುಗಾಡಿಗೆ ಅಡ್ಡ ಸಿಕ್ಕಿ ಆಕಸ್ಮಿಕವಾಗಿ ಮೃತಪಟ್ಟಿದ್ದು, ಈ ಕುರಿತು ರಾಯ ಚೂರು ರೈಲ್ವೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಮೃತನ ವಾರುಸುದಾರ ಪತ್ತೆ ಹಾಗೂ ಪಿಎಂಇ ಸಲುವಾಗಿ ಮೃತದೇಹವನ್ನು ಯಾದಗಿರಿ ಯಿಮ್ಸ್ ಆಸ್ಪತ್ರೆಯ ಶೀತಲ ಶವಾಗಾರದಲ್ಲಿ ಇಡಲಾಗಿದೆ. ಸುಮಾರು 35 ವರ್ಷದ ಅಪರಿಚಿತ ಗಂಡಸಿನ ಎತ್ತರ 5.2 ಅಡಿ, ಕಪ್ಪು ಮೈ ಬಣ್ಣ, ಉದ್ದ ಮುಖ, ಕಪ್ಪು ಕಣ್ಣುಗಳು, ತಲೆಯಲ್ಲಿ 2 ಇಂಚು ಕಪ್ಪು ಕೂದಲು, ಕಪ್ಪು ಗಡ್ಡ ಮತ್ತು ಮೀಸೆ ಹೋದಿದ್ದು, ಕೇಸರಿ ಬಣ್ಣದ ಟೀ ಶರ್ಟ್ ಅದರ ಮೇಲೆ ಅನುಗ್ರಹ ಕ್ಷೇತ್ರ ಅಬ್ಬೆ ತುಮಕೂರು ವಿಶ್ವಗಂಗಾ ಗೆಳೆಯರ ಬಳಗ ಸೇವೆ ಶ್ರೀ ವಿಶ್ವರಾಧ್ಯ ಇಂಜಿನಿಯ ರಿಂಗ್ ಸಲ್ಯೂಷನ್ಸ್ ಕಲಬುರಗಿ ಅಂತಾ ಬರೆದಿದೆ. ಈ ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಈ ಮೃತನ ಹೋಲಿಕೆಯ ಪುರುಷ ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂ.ಸಂ.08532- 231716 ಮೊ. ಸಂ.9480 802111 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080-22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಠಾಣೆಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಕೆಶಿ ಸಿಎಂ ಆಗ್ತಾರೆ ಎಂದಿದ್ದ ಭವಿಷ್ಯ ನಿಜವಾಯ್ತು

ಗಾಣಧಾಳ ಪಂಚಮುಖಿ ಪ್ರಾಣದೇವರ ಕ್ಷೇತ್ರದ ಮಹಿಮೆ | 2025ರಲ್ಲಿ ಕ್ಷೇತ್ರಕ್ಕೆ ಆಗಮಿಸಿ ಡಿಕೆಶಿ ದಂಪತಿಯಿಂದ ವಿಶೇಷ ಪೂಜೆ

ಈ ಹಿಂದೆಯೂ ಗುಂಡೂರಾವ್,ಬಂಗಾರಪ್ಪ,ಮೊಯಿಲಿ,ಯಡಿಯೂರಪ್ಪ ಕ್ಷೇತ್ರಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಸಿಎಂ ಗಾದಿ ಏರಿದ್ದರು!

• ರಾಮಕೃಷ್ಣ ದಾಸರಿ
ಕನ್ನಡಪ್ರಭ ವಾರ್ತೆ ರಾಯಚೂರು

ರಾಜ್ಯದ ಮುಖ್ಯಮಂತ್ರಿಯಾಗಬೇಕು ಎನ್ನುವ ಅಗಾಧವಾದ ಸಂಕಲ್ಪ ಹೊತ್ತು ವಿಶೇಷ ಪೂಜೆ ಸಲ್ಲಿಸಿದ ಪ್ರಾಣದೇವರ ಕೃಪೆಗೆ ಪಾತ್ರರಾದ ಡಿ.ಕೆ. ಶಿವಕುಮಾರ ಅವರ ಬೇಡಿಕೆಯು ಕೆಲವೇ ತಿಂಗಳಲ್ಲಿ ಸಾಕಾರಗೊಂಡಿದ್ದು, ಅಂದು ಅರ್ಚಕರು ನುಡಿದಿದ್ದ ಭವಿಷ್ಯವು ಇಂದು ನಿಜವಾಗಿದೆ.

ಕಳೆದ ಅ.22 ದೀಪಾವಳಿ ಹಬ್ಬದ ಬಲಿಪಾಡ್ಯಮಿ ದಿನದಂದು ಡಿ.ಕೆ.ಶಿವಕುಮಾರ ಹಾಗೂ ಪತ್ನಿ ಉಷಾ ಅವರು ದಂಪತಿ ಸಮೇತರಾಗಿ ಮಂತ್ರಾಲಯದ ಶ್ರೀರಾಘ ವೇಂದ್ರ ಸ್ವಾಮಿಗಳ ದರ್ಶನ ಪಡೆದು ಅಲ್ಲಿಂದ ರಾಯಚೂರು ತಾಲೂಕಿನ ಗಾಣಧಾಳ ಪಂಚಮುಖಿ ಆಂಜನೇಯ ಸ್ವಾಮಿಗಳ ದೇವಸ್ಥಾನಕ್ಕೆ ಆಗಮಿಸಿ ವಿಶೇಷ ಪೂಜೆ-ಪುನಸ್ಕಾರಗಳನ್ನು ನೆರವೇರಿಸಿ ಹೋಗಿದ್ದರು. ಡಿಕೆಶಿ ಅವರು ಮನಸ್ಸಿನಲ್ಲಿ ಸಂಕಲ್ಪಿಸಿ ಪ್ರಾಣದೇವರಿಗೆ ಮಾಡಿದ ಸೇವೆಯ ಫಲ ತಪ್ಪದೇ ದೊರೆಯಲಿದೆ ಎಂದು ಅಂದು ದೇವಸ್ಥಾನದ ಪ್ರಧಾನ ಅರ್ಚಕರಾದ ಶಾಮಾಚಾರ್ಯ ಅವರು ಭವಿಷ್ಯ ನುಡಿದಿದ್ದರು. ಇಂದು ಸತ್ಯವಾಗಿಸುವುದರ ಮುಖಾಂತರ ಸುಕ್ಷೇತ್ರದ ಮಹಿಮೆಯನ್ನು ಮತ್ತೊಮ್ಮೆ ಪರಿಚಯಿಸುವಂತೆ ಮಾಡಿದೆ.

ರಾಯಚೂರು ತಾಲೂಕಿನ ಗಾಣಧಾಳ ಪಂಚಮುಖಿ ದೇವಸ್ಥಾನಕ್ಕೆ ಡಿ.ಕೆ.ಶಿವಕುಮಾರ ದಂಪತಿ ಕಳೆದ 2025 ಅ.22ಕ್ಕೆ ಭೇಟಿ ನೀಡಿ ವಿಶೇಷ ಪೂಜೆಯನ್ನು ಮಾಡಿದ್ದರು.

ಪಂಚಮುಖಿ ಪ್ರಾಣದೇವರಿಗೆ ಮಧು ಅಭಿಷೇಕ, ಪುಷ್ಪಾರ್ಚನೆ ಸೇವೆ: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠಕ್ಕೆ ಆಗಮಿಸುವ ಭಕ್ತರು ತಪ್ಪದೇ ಪಂಚಮುಖಿ ಆಂಜನೇಯ ಸ್ವಾಮಿಗಳ ದೇವಸ್ಥಾನಕ್ಕೆ ಬಂದು ಹೋಗುತ್ತಾರೆ. ಐದು ಮುಖಗಳ ಪ್ರಾಣದೇವರು ಸ್ವಯಂಭೂ ಆಗಿ ನೆಲೆಸಿರುವ ಕ್ಷೇತ್ರವಿದಾಗಿದ್ದು, ಕಲಿಯುಗದ ಕಲ್ಪತರು ಶ್ರೀರಾಘವೇಂದ್ರ ಸ್ವಾಮಿಗಳ ಆರಾಧಿಸುವ ಶ್ರೀರಾಮ ದೇವರ ಗುರುಗಳಾದ ಪಂಚಮುಖಿ ಪ್ರಾಣದೇವರಲ್ಲಿ ಯಾರೇ ಕಷ್ಟ ಕಾರ್ಪಣ್ಯ ಗಳಿಂದ ಆಗಮಿಸಿ ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಪೂಜೆ, ದರ್ಶನ ಇತರೆ ಸೇವೆಗಳನ್ನು ಮಾಡಿದ್ದಲ್ಲಿ ಅವರಿಗೆ ಪ್ರಾಣದೇವರು ಕರುಣಿಸಲಿದ್ದಾರೆ ಎನ್ನುವ ನಂಬಿಕೆಯೂ ನೂರಾರು ವರ್ಷಗಳಿಂದಿದೆ.

ಅದರಂತೆ ಸುಕ್ಷೇತ್ರ ಗಾಣಧಾಳ ಪಂಚಮುಖಿ ಪ್ರಾಣದೇವರ ದೇವಸ್ಥಾನಕ್ಕೆ ದಂಪತಿ ಸಮೇತರಾಗಿ ಬಂದಿದ್ದ ಕೆ.ಡಿ.ಶಿವಕುಮಾರ ಅವರಿಗೆ ಗುಡಿಯ ಅರ್ಚಕರು ಮನಸ್ಸಿನಲ್ಲಿ ಇಷ್ಟಾರ್ಥಗಳನ್ನು ಬೇಡಿಕೊಂಡು ಪ್ರಾಣದೇವರ ದರ್ಶನ ಪಡೆಯುವಂತೆ ಸೂಚಿಸಿದ್ದರು. ಅದರಂತೆ ದೇವರಿಗೆ ಮಧು ಅಭಿಷೇಕ, ಪುಷ್ಪಾರ್ಚನೆ ಸೇವೆ ಯನ್ನು ಮಾಡಿ, ದರ್ಶನ ಪಡೆದಿದ್ದರು. ಮಧು ಅಭಿಷೇಕ ಸೇವೆಯಲ್ಲಿ ಪಂಚಮುಖಿ ಪ್ರಾಣದೇವರ ವಿಶೇಷ 42 ಶ್ಲೋಕವನ್ನು ಹೇಳಿ ಪೂಜೆ ಮಾಡಿದರೆ ಎಲ್ಲ ಕಷ್ಟ ಕಾರ್ಪಣ್ಯಗಳು ದೂರವಾಗುವುದರ ಜೊತೆಗೆ ಇಷ್ಟಾರ್ಥಗಳು ಸಿದ್ಧಿಸಲಿರುವುದರಿಂದ ಅಂದು ಡಿಕೆಶಿ ದಂಪತಿಗಳಿಂದ ಅರ್ಚಕರು ಈ ಸೇವೆಯನ್ನು ಮಾಡಿಸಿದ್ದರು.

ಐದು ಜನ ಸಿಎಂ ಕ್ಷೇತ್ರಕ್ಕೆ ಭೇಟಿ: ಗಾಣಧಾಳ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಇಲ್ಲಿ ತನಕ ರಾಜ್ಯದ ಐದು ಜನ ಸಿಎಂಗಳು ಭೇಟಿ ನೀಡಿದ್ದಾರೆ. ಈ ಹಿಂದೆ ಗುಂಡೂರಾವ್ ಅವರು ದೇವಸ್ಥಾನಕ್ಕೆ ಆಗಮಿಸಿ ಮಂಡಲ ಸೇವೆಯನ್ನು ಮಾಡಿಸಿ ಹೋದ ಬಳಿಕವೇ ಸಿಎಂ ಆಗಿದ್ದರೆ ಎಂದು ನಮ್ಮ ತಂದೆಯವರು ತಿಳಿಸಿದ್ದಾರೆ ಎಂದು ಗುಡಿ ಪ್ರಧಾನ ಅರ್ಚಕ ಶಾಮಾಚಾರ್ಯ ತಿಳಿಸಿದರು. ಅದರಂತೆ ಬಂಗಾರಪ್ಪ, ವೀರಪ್ಪ ಮೊಯಿಲಿ ಹಾಗೂ ಬಿ.ಎಸ್.ಯಡಿಯೂರಪ್ಪ ಅವರು ಸಹ ಈ ಕ್ಷೇತ್ರಕ್ಕೆ ಬಂದು ಹೋದ ಬಳಿಕವೇ ಸಿಎಂ ಆಗಿದ್ದರು ಇದೀಗ ಡಿ.ಕೆ.ಶಿವಕುಮಾರ ಅವರು ಸಹ ಈ ಕ್ಷೇತ್ರಕ್ಕೆ ಭೇಟಿ ನೀಡಿದ ಏಳೇ ತಿಂಗಳಲ್ಲಿ ತಾವು ಆಸೆ ಪಟ್ಟಂತಹ ಖರ್ಚಿಯನ್ನು ಅಲಂಕರಿಸಿದ್ದಾರೆ.

ಸರ್ಕಾರಿ ಪಾಲಿಟೆಕ್ನಿಕ್ ಪ್ರವೇಶ ಸಂಖ್ಯೆ ಹೆಚ್ಚಿಸಬೇಕಿದೆ

ಪಾಲಕರು ವಿಶೇಷ ಗಮನ ಹರಿಸಲು ಪ್ರವೇಶಾಧಿಕಾರಿ ಜಿ.ಎಸ್.ಪ್ರಕಾಶ ಮನವಿ | ಸೌಲಭ್ಯ ಸದುಪಯೋಗಕ್ಕೆ ಕರೆ

• **ಕನ್ನಡಪ್ರಭ ವಾರ್ತೆ** ದೇವದುರ್ಗ

ಪಟ್ಟಣದ ಎಜ್ಯುಕೇಶನ್ ಲೇಔಟ್‌ನಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ (ಡಿಪ್ಲೋಮಾ) ಕೋರ್ಸ್‌ಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಹೆಚ್ಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು, ಪಾಲಕರು ವಿಶೇಷ ಗಮನ ಹರಿಸಬೇಕು ಎಂದು ಕಾಲೇಜಿನ ಪ್ರವೇಶಾಧಿಕಾರಿ ಜಿ.ಎಸ್ .ಪ್ರಕಾಶ ಮನವಿ ಮಾಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2026-27ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಇಳಿಮುಖವಾಗಿದ್ದು ಕಳವಳ ಮೂಡಿಸಿದೆ. ರಾಜ್ಯ ಸರ್ಕಾರದ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿಲ್ಲಿ ಅನುಭವಿ ಮತ್ತು ನುರಿತ ಉಪನ್ಯಾಸಕರಿದ್ದಾರೆ. 8 ಉಪನ್ಯಾಸಕರು ಜೊತೆಗೆ 15 ಅತಿಥಿ ಉಪನ್ಯಾಸಕರ ಸೇವೆ ಲಭ್ಯವಿದೆ. ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಶನ್ ಕೋ 48 ವಿದ್ಯಾರ್ಥಿಗಳು, ಕಂಪ್ಯೂಟರ್‌ಸೈನ್ಸ್ ಇಂಜನೀಯರಿಂಗ್ ಕೋರ್ಸ್‌ಗೆ 30 ವಿದ್ಯಾರ್ಥಿಗಳು, ಸಿವಿಲ್ ಇಂಜನೀಯರಿಂಗ್ ವಿಭಾಗಕ್ಕೆ 48 ಮತ್ತು ಮೆಕ್ಯಾನಿಕಲ್ ಇಂಜನೀಯರಿಂಗ್ ಕೋರ್ಸಗೆ 48 ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಗುರಿ ಹೊಂದಲಾಗಿದೆ.

ಕೆಕೆಆರ್‌ಡಿಬಿ ಯೋಜನೆಯಿಂದ ಕಾಲೇಜಿನ ಮೂಲ ಭೂತ ಸೌಕರ್ಯಗಳಿಗೆ ಅನುದಾನ ಲಭ್ಯವಿದೆ. ಈಗಾಗಲೇ ಉತ್ತಮ ಕಾಲೇಜು ಕಟ್ಟಡ, ಸುಸಜ್ಜಿತ ಬೋಧನಾ ಕೋಣೆಗಳು ಮತ್ತು ಪ್ರಯೋಗಾಲಯಗಳು, ಗ್ರಂಥಾಲಯ, ಎನ್‌ಎಸ್‌ಎಸ್ ಯುನಿಟ್, ವಿದ್ಯಾರ್ಥಿ ಗಳ ಕ್ಷೇಮಾಭಿವೃದ್ಧಿ ಸಂಘ, ಡಿಜಿಟಲ್ ಕಲಿಕೆಗೆ ಉತ್ತೇಜನ, ಶುದ್ಧ ನೀರಿನ ಘಟಕ, ಸಿಸಿಟಿವಿ ಆಧರಿತ ಮಾನಿಟರಿಂಗ್ ವ್ಯವಸ್ಥೆ ಹಾಗೂ ಕಾಲೇಜು ಬಳಿಯೇ ವಸತಿ ನಿಲಯಗಳ ಸೌಲಭ್ಯಗಳಿದ್ದು, ವಿದ್ಯಾರ್ಥಿಗಳು ಮತ್ತು ಪಾಲಕರು ಗಮನಿಸಬೇಕಾಗಿದೆ. ಡಿಪ್ಲೋಮಾ ಕೋರ್ಸ್‌ಗೆ ಸಾಮಾನ್ಯರಿಗೆ 4,680 ರು. ಹಾಗೂ ಎಸ್ಸಿ / ಎಸ್ಟಿ ವಿದ್ಯಾರ್ಥಿಗಳಿಗೆ ಕೇವಲ 530 ರು. ಶುಲ್ಕವಿದ್ದು, ವಿದ್ಯಾರ್ಥಿ ವೇತನ ಖಂಡಿತ ದೊರಕುತ್ತದೆ. ಪ್ರಸಕ್ತ ಸಂದರ್ಭದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಭಾರಿ ಬೇಡಿಕೆ ಇದೆ. ಪ್ರವೇಶ ಹೆಚ್ಚಿಸಲು ಉಪನ್ಯಾಸಕರ 5 ತಂಡಗಳ ಮೂಲಕ ಎಲ್ಲಾ ಪ್ರೌಢಶಾಲೆಗಳಿಗೆ ಭೇಟಿ ಜಾಗೃತಿ ಮೂಡಿಸಲಾಗಿದೆ. ಕಾಲೇಜು ಪ್ರಾರಂಭಗೊಂಡಾಗಿನಿಂದಲೂ 100% ಫಲಿತಾಂಶ ಬಂದಿದೆ. ರ್‍ಯಾಂಕಿಗ್ ಗ್ರೇಡನ್ನೂ ಕೂಡ ವಿದ್ಯಾರ್ಥಿಗಳು ಪಡೆದಿದ್ದಾರೆ. ಸರ್ಕಾರ ನೀಡಿರುವ ಸೌಲಭ್ಯವಕಾಶದ ಸದುಪಯೋಗ ಮಾಡಿಕೊಳ್ಳಬೇಕಾಗಿದೆ.

ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು, ಪಾಲಕರು, ಪ್ರೌಢ ಶಾಲೆಗಳ ಹಾಗೂ ಖಾಸಗಿ ಪ್ರೌಢಶಾಲೆಗಳ ಶಿಕ್ಷಕರು ಸಹಕರಿಸಿ ಡಿಪ್ಲೋಮಾ ಕಾಲೇಜಿಗೆ ಪ್ರವೇಶ ಸಂಖ್ಯೆ ಹೆಚ್ಚಿಸಲು ಸಹಕರಿಸಬೇಕೆಂದು ಕಾಲೇಜಿನ ಪ್ರವೇಶಾಧಿಕಾರಿ ಜಿ.ಎಸ್.ಪ್ರಕಾಶ ತಿಳಿಸಿದರು.

ಈ ಸಂದರ್ಭದಲ್ಲಿ ಮೆಕ್ಯಾನಿಕ್ ವಿಭಾಗದ ಮುಖ್ಯಸ್ಥ ನಿಜಾನಂದರೆಡ್ಡಿ, ಮಧು ಸಿವಿಲ್ ವಿಭಾಗದ ಮುಖ್ಯಸ್ಥರು, ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ವಿಠಲಾನಿ ಪರೇಶ, ಮೆಕ್ಯಾನಿಕ್ ವಿಭಾಗದ ಹೊನ್ನಪ್ಪ ಇದ್ದರು.

ನಾಳೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಜಿಲ್ಲಾ ಪ್ರವಾಸ

ರಾಯಚೂರು: ಭಾರತ ಸರ್ಕಾರದ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಇದೇ ಜೂ.4 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.

ಗುರುವಾರ ಬೆಳಗ್ಗೆ 11:15ಕ್ಕೆ ಯಾದಗಿರಿ ಜಿಲ್ಲೆಯ ಗುರುಮಿಠಕಲ್ ತಾಲೂಕಿನ ಬಡೆಪಲ್ಲಿ ಗ್ರಾಮದಿಂದ ನಿರ್ಗಮಿಸಿ, ಮಧ್ಯಾಹ್ನ 12 ಗಂಟೆಗೆ ರಾಯಚೂರಿನ ಶಕ್ತಿನಗರಕ್ಕೆ ಆಗಮಿಸಿ ಶಕ್ತಿ ನಗರದ ಆರ್.ಟಿ.ಪಿ.ಎಸ್. ಅತಿಥಿ ಗೃಹದಲ್ಲಿ ರಾಯಚೂರು ಮತ್ತು ಯಾದಗಿರಿ ಮಹತ್ವಾಕಾಂಕ್ಷೆ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 1:30 ರಿಂದ 2:30ರವರೆಗೆ ಕಾಯ್ದಿರಿಸಲಾಗಿದ್ದು, ಮಧ್ಯಾಹ್ನ 2:30ಗಂಟೆಗೆ ಶಕ್ತಿನಗರದ ಆರ್.ಟಿ.ಪಿ.ಎಸ್ ಅತಿಥಿ ಗೃಹದಿಂದ ನಿರ್ಗಮಿಸಿ, ರಾಯಚೂರಿನ ನೂತನ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿ ಭಾರತ ವನ ಪ್ಲಾಂಟೇಷನ್ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಸಂಜೆ 4 ಗಂಟೆಗೆ ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿಯಿಂದ ವಿಜಯನಗರ ಜಿಲ್ಲೆಯ ಹೊಸಪೇಟೆ ಕಡೆಗೆ ಪ್ರಯಾಣ ಬೆಳೆಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಅರ್ಥಪೂರ್ಣವಾಗಿ ಆಚರಿಸಿ

ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್ ಸೂಚನೆ | ಗ್ರಾಪಂಗಳಲ್ಲಿ ಡಂಗುರ ಸಾರುವುದರ ಮೂಲಕ ಮಾಹಿತಿ ನೀಡಲು ಕರೆ

• **ಕನ್ನಡಪ್ರಭ ವಾರ್ತೆ** ರಾಯಚೂರು

ಜಿಲ್ಲಾಡಳಿತದಿಂದ ಇದೇ ಜೂ.2ರಂದು ವಿಶ್ವ ಬಾಲಕಾರ್ಮಿಕ ವಿರೋಧಿ ದಿನವನ್ನು ಅಚ್ಚು ಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿ ಸಲು ಅಗತ್ಯ ಕ್ರಮವಹಿಸುವಂತೆ ರಾಯ ಚೂರು ವಿಭಾಗದ ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಸ್ಥಳೀಯ ಜಿಲ್ಲಾಡಳಿತ ಭವನದ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಂಗಳವಾರ ಮಾತನಾಡಿ, ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಜೂ.12ರಂದು ಬೆಳಗ್ಗೆ 11ಗಂಟೆಗೆ ಎಲ್ಲಾ ಸರ್ಕಾರಿ ನೌಕರರು ತಮ್ಮ ಕಚೇರಿ. ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಒಟ್ಟಾಗಿ ಸೇರಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ-2026ರ ಅಂಗವಾಗಿ ಪ್ರಮಾಣ ವಚನ ಸ್ವೀಕರಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸಹಾಯಕ ಆಯುಕ್ತರು ಸೂಚಿಸಿದರು. ಜೂ.12 ರಂದು ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲೆಯ ಪ್ರತಿ ಗ್ರಾಪಂ ಯಿಂದ ಎಲ್ಲಾ ಗ್ರಾಮಗಳಲ್ಲಿ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಕಾರ್ಯ ದರ್ಶಿಗಳು, ಬಿಲ್ ಕಲೆಕ್ಟರ್, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಎಲ್ಲಾ ಸಿಬ್ಬಂದಿ, ಒಟ್ಟಾಗಿ ಸೇರಿ ಕಾರ್ಯಕ್ರಮ ಆಚರಣೆ ಮಾಡಿ ಪ್ರಮಾಣ ವಚನ ಸ್ವೀಕರಿಸುವುದು ಹಾಗೂ ಈ ದಿನದಂದು ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರೋಧಿ ಬಗ್ಗೆ ಡಂಗೂರ ಸಾರುವುದರ ಮೂಲಕ ಜನರಿಗೆ ಮಾಹಿತಿ ನೀಡುವುದರ ಜೊತೆಗೆ ಈ ಕಾರ್ಯ ಕ್ರಮವನ್ನು ಅಚ್ಚುಕಟ್ಟಾಗಿ ನಡೆಸಬೇಕು ಎಂದರು. ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರೋಧಿ ದಿನದ ಕುರಿತು ವೇದಿಕೆಯ ಮೇಲೆ ಪ್ರೌಢ ಶಾಲಾ ಮಕ್ಕಳಿಂದ ಚಿತ್ರಕಲಾ ಪ್ರದರ್ಶನ ಹಾಗೂ ಕಿರು ನಾಟಕ ಪ್ರದರ್ಶನ ಕೈಗೊಂಡು ಜಾಗೃತಿಯನ್ನು ಮಾಡಿಸಬೇಕು. ಅಲ್ಲದೆ ಜಿಲ್ಲೆಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಎಲ್ಲಾ ಪಟ್ಟಣ ಪಂಚಾಯತ್ಗಳಲ್ಲಿ ಹಾಗೂ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯನ್ನು ಆಚ ರಿಸಿ, ಪ್ರಮಾಣ ವಚನ ಸ್ವೀಕರಿಸಲು ಮತ್ತು ಕಸ ವಿಲೇವಾರಿ ವಾಹನಗಳಲ್ಲಿ ಉಚಿತ ವಾಗಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರೋಧಿ ಕುರಿತು ಜಿಂಗಲ್ ಅಥವಾ ಘೋಷಣೆಗಳನ್ನು ಕೂಗಿಸಬೇಕೆಂದು ಸಭೆಯಲ್ಲಿ ಸಹಾಯಕ ಆಯುಕ್ತರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತೆ ಸಂತೋಷ ರಾಣಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಆರತಿ ಹಾಜರಿದ್ದರು.

ರಾಯಚೂರು ಜಿಲ್ಲಾಡಳಿತ ಭವನದ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಪೂರ್ವಭಾವಿ ಸಭೆ ನಡೆಯಿತು.

ದೋತರಬಂಡಿ ಶ್ರೀ ಹುಲಿಗೆಮ್ಮ ದೇವಿಯ ಬೆಳ್ಳಿ, ಬಂಗಾರ ಕಳವು

ಕವಿತಾಳ: ಸಮೀಪದ ದೋತರಬಂಡಿ ಗ್ರಾಮದ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ಬೆಳ್ಳಿ ಮತ್ತು ಬಂಗಾರ ಕಳವು ಮಾಡಲಾಗಿದೆ.

ಭಾನುವಾರ ರಾತ್ರಿ ಮಳೆ ಬರುತ್ತಿರುವಾಗ ಗರ್ಭ ಗುಡಿಯ ಬೀಗ ಮುರಿದ ಕಳ್ಳರು ದೇವಿ ಮೂರ್ತಿ ಮೇಲಿದ್ದ 51 ತೊಲ ಭಾರದ ಬೆಳ್ಳಿಯ ಮುಖ ಮತ್ತು ಹಸ್ತ, ಎರಡು ಲಿಂಗದಕಾಯಿ, 15 ಸಾವಿರ ಬೆಲೆ ಬಾಳುವ ಚಿನ್ನದ ಮಾಂಗಲ್ಯ ಹಾಗೂ ಒಂದು ತಾಮ್ರದ ಕೊಡವನ್ನು ಕದ್ದಿದ್ದಾರೆ. ಇತ್ತೀಚೆಗೆ ಜಾತ್ರೆ ಹಿನ್ನೆಲೆಯಲ್ಲಿ ಕಾಣಿಕೆ ಹುಂಡಿಯನ್ನು ಖಾಲಿ ಮಾಡಿದ ಪರಿಣಾಮ ಅದನ್ನು ಅಲ್ಲಿಯೇ ಬಿಟ್ಟಿದ್ದಾರೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಘಟನಾ ಸ್ಥಳಕ್ಕೆ ಕವಿತಾಳ ಠಾಣೆ ಪೊಲೀಸರು ಭೇಟಿ ನೀಡಿದ್ದು, ಮುಂದಿನ ತನಿಖೆ ಕೈಗೊಂಡಿದ್ದಾರೆ.

ಈರಣ್ಣ ನಿಧನ

ರಾಯಚೂರು : ಸ್ಥಳೀಯ ನಿವಾಸಿ ಈರಣ್ಣ ಲಂಗೋಟೆ ಗೌಳಿ (70) ತೀವ್ರ ಅನಾರೋಗ್ಯದಿಂದ ಮಂಗಳವಾರ ಸಂಜೆ ನಿಧನರಾದರು. ಮೃತ ರು ಪತ್ನಿ, ಪುತ್ರ ಶಾಮಸುಂದರ, ಇಬ್ಬರು ಪುತ್ರಿಯರು, ಅಪಾರ ಬಂಧು ಗಳನ್ನು ಅಗಲಿದ್ದು, ಜೂ.3 ಬುಧವಾರ ಬೆಳಗ್ಗೆ 11 ಗಂಟೆಗೆ ರೆಡಿಯೋ ಸ್ಟೇಷನ್ ಹತ್ತಿರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಗೌರವಾನ್ವಿತ ಸಾಲ ವಸುಲಾತಿ ನ್ಯಾಯಾಧಿಕರಣ-2, ಬೆಂಗಳೂರು
ಬಿಎಸ್‌ಎನ್‌ಎಲ್ ಬಿಲ್ಡಿಂಗ್, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ್ ರಸ್ತೆ, ಬೆಂಗಳೂರು-560001
ಒ. ಎ. ನಂ. 1315 / 2023
ನಡುವೆ : ಕೆನರಾ ಬ್ಯಾಂಕ್, ರಾಯಚೂರು ಮುಖ್ಯ ಶಾಖೆ ಲಿಂಗಸುಗೂರು ರಸ್ತೆ ಮುಖ್ಯ ರಸ್ತೆ ರಾಯಚೂರು-584102 ...ಅರ್ಜಿದಾರರು
ಮತ್ತು : ಶ್ರೀ. ತಿಮ್ಮಪ್ಪ @ತಿಮ್ಮಯ್ಯ
ಶ್ರೀಮತಿ ದಾನಮ್ಮ
ಶ್ರೀ ಸಣ್ಣತಿಮ್ಮಯ್ಯ, ನಿಧನರಾದ ಕಾರಣ ಅವರ ಕಾನೂನು ಉತ್ತರಾಧಿಕಾರಿಗಳು ಪ್ರತಿನಿಧಿಸುತ್ತಾರೆ
3(ಎ) ಶ್ರೀಮತಿ ನಾಗಮ್ಮ
3(ಬ) ಶ್ರೀ ಮಲ್ಲಯ್ಯ ...ಪ್ರತಿವಾದಿಗಳು
ಸಾಲ ವಸುಲಾತಿ ನ್ಯಾಯಾಧಿಕರಣ ನಿಯಮ (ಕ್ರಮ) 1993 ರ ನಿಯಮ 23 (Viii) ಅಡಿಯಲ್ಲಿ ನೀಡಲಾಗಿರುವ ಸಮನ್ಸ್
ಅರ್ಜಿದಾರರು, ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಕಾಯಿದೆ, 1993ರಂತೆ ಬಾಕಿ ಇರುವ ಸಾಲವನ್ನು ವಸೂಲಿಗಾಗಿ ಸೆಕ್ಷನ್ 19ರ ಅಡಿಯಲ್ಲಿ ರೂ. 48,41,471.36/- [ರೂಪಾಯಿಗಳು ನಲವತ್ತೆಂಟು ಲಕ್ಷ ನಲವತ್ತು ಒಂದು ಸಾವಿರದ ನಾಲ್ಕುನೂರ ಎಪ್ಪತ್ತೊಂದು ಮತ್ತು ಮೂವತ್ತಾರು ಪೈಸೆಗಳು] ಜೊತೆಗೆ ಪ್ರಸ್ತುತ ಮತ್ತು ಮುಂಬರುವ ಬಡ್ಡಿ ಮತ್ತು ಇತರೆ ವೆಚ್ಚಗಳು ವಸೂಲಾತಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಮೇಲೆ ತಿಳಿಸಿರುವ ಪ್ರತಿವಾದಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, ಈ ಸಮನ್ಸ್/ ನೋಟೀಸ್‌ನ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗಾಗಿ ನಿಮ್ಮ ಕಾರಣವನ್ನು ಸಲ್ಲಿಸಬೇಕು ಅಥವಾ ದಿನಾಂಕ 03.07.2026 ರಂದು ಬೆಳಿಗ್ಗೆ 10.30ಕ್ಕೆ ಖುದ್ದಾಗಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ತಿಳಿಸಿರುವ ನ್ಯಾಯಾಧಿಕರಣದ ಎದುರು ಹಾಜರಿಯೊಂದಿಗೆ ಲಿಖಿತ ಹೇಳಿಕೆ ನೀಡಬೇಕಾಗಿ ಈ ಮೂಲಕ ತಿಳಿಸುತ್ತಿದ್ದೇವೆ.
ದಿನಾಂಕ: 01.06.2026 ರಂದು ನನ್ನ ಸಹಿ ಮತ್ತು ನ್ಯಾಯಮಂಡಳಿ ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಮಂಡಳಿಯ ಆದೇಶದ ಮೇರೆಗೆ, ನೋಂದಾಯಿತ ಸಾಲ ವಸೂಲಾತಿ ನ್ಯಾಯಮಂಡಳಿ-II ಬೆಂಗಳೂರು
ಗೆ,
ಶ್ರೀ ಸಣ್ಣ ತಿಮ್ಮಯ್ಯ, ನಿಧನರಾದಾಗಿನಿಂದ ಕಾನೂನು ಉತ್ತರಾಧಿಕಾರಿಗಳಿಂದ ಪ್ರತಿನಿಧಿಸಲಾಗಿದೆ
3(ಎ) ಶ್ರೀಮತಿ ನಾಗಮ್ಮ ಬಿನ್ ಶ್ರೀ ಸಣ್ಣ ತಿಮ್ಮಯ್ಯ H ಸಂ.62, ಕಟ್ಲಟ್ಕೂರ್ ಪೋಸ್ಟ್ ಕಟ್ಲಟ್ಕೂರ್-584102 ರಾಯಚೂರು ತಾಲೂಕು ಮತ್ತು ಜಿಲ್ಲೆ
3(ಬಿ) ಶ್ರೀ ಮಲ್ಲಯ್ಯ ಬಿನ್ ಶ್ರೀ ಸಣ್ಣ ತಿಮ್ಮಯ್ಯ H ಸಂ.62, ಕಟ್ಲಟ್ಕೂರ್ ಪೋಸ್ಟ್ ಕಟ್ಲಟ್ಕೂರ್-584102 ರಾಯಚೂರು ತಾಲೂಕು ಮತ್ತು ಜಿಲ್ಲೆ

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಸಿಂಧನೂರು

ಗ್ಯಾಸ್, ಪೆಟ್ರೋಲ್, ಡಿಸೇಲ್ ದರ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ಕಾರ್ಯಕರ್ತರು ನಗರದ ಗಾಂಧಿವೃತ್ತ ದಲ್ಲಿ ಪ್ರತಿಭಟನೆ ನಡೆಸಿದರು.

ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದ್ದರೂ ನಿಯಂತ್ರಣ ಮಾಡುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಬೆಲೆ ಏರಿಕೆಯಿಂದ ಜನಸಾಮಾನ್ಯರ ಬದುಕು ದುಸ್ತರವಾಗುತ್ತಿದೆ. ಜನರ ಬದುಕಿನಲ್ಲಿ ಚೆಲ್ಲಾಟ ವಾಡುತ್ತಿದೆ. ಮುಂದಿನ ದಿನಗಳಲ್ಲಿ ಜನರು ಬಿಜೆಪಿಗೆ ಶೀಘ್ರ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಯುವ ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮೆರವಣಿಗೆ ಮೂಲಕ ತಹಸೀಲ್ದಾರ್ ಕಾರ್ಯಾಲಯಕ್ಕೆ ತೆರಳಿ ತಹಸೀಲ್ದಾರ್‌ರ ಮುಖಾಂತರ ರಾಷ್ಟ್ರಪತಿಗೆ ಮನವಿ ರವಾನಿಸಲಾಯಿತು.

ಈ ವೇಳೆ ಯುವ ಕಾಂಗ್ರೆಸ್ ಮುಖಂಡರಾದ ಖಾಜಾ ಹುಸೇನ್ ರೌಡಕುಂದಾ, ಅಮರೇಶ ಗಿರಿಜಾಲಿ, ಹಬೀಬ್ ಖಾಜಿ, ಖಾಜಾ ಬಡಿಬೇಸ್, ಮಹ್ಮದ್ ರಫಿ, ಯುಸೂಫ್ ಎತ್ಮಾರಿ, ಹನುಮಂತ ಕರ್ನಿ, ಶೈಬಾಜ್ ಬೇಗ್, ಸುದೀಪ್, ಸಂತೋಷ, ರಮೇಶ, ಮುನ್ನಾ, ಪ್ರವೀಣ ಧುಮತಿ, ಮೌನೇಶ ವಕೀಲ ಭಾಗವಹಿಸಿದ್ದರು.

ಸನ್ಮಾನಗಳಿಂದ ಸಾಮಾಜಿಕ ಜವಾಬ್ದಾರಿ ಹೆಚ್ಚುತ್ತದೆ: ನವಲಿ

ಉಪ್ಪಾರವಾಡಿ ವಶಿಷ್ಠಧಾಮದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ, ಸಾಧಕರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಸಿಂಧನೂರು

ಸನ್ಮಾನಗಳಿಂದ ಸಾಧಕರಿಗೆ ಸಾಮಾಜಿಕ ಜವಾಬ್ದಾರಿ ಹೆಚ್ಚುತ್ತದೆ ಎಂದು ವಶಿಷ್ಠಧಾಮ ಸೇವಾ ಟ್ರಸ್ಟ್ ಅಧ್ಯಕ್ಷ ಭೀಮಸೇನಾಚಾರ್ಯ ನವಲಿ ಹೇಳಿದರು.

ನಗರದ ಉಪ್ಪಾರವಾಡಿಯಲ್ಲಿರುವ ವಶಿಷ್ಠಧಾಮದಲ್ಲಿ ಜರುಗಿದ ಅಧಿಕಮಾಸದ ಸಾಮೂಹಿಕ ಸತ್ಯನಾರಾಯಣ ಪೂಜೆ, ಕುಮಾರಿ ಪೂಜೆ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು. ವಿಪ್ರ ಸಮಾಜದ ಮುಖಂಡ ಲಕ್ಷ್ಮಣರಾವ್ ಕುಲಕರ್ಣಿ ಮಾತನಾಡಿ ವಶಿಷ್ಠಧಾಮದಿಂದ ಆಚರಿಸುತ್ತಿರುವ ಕಾರ್ಯ ಕ್ರಮಗಳು ಮಕ್ಕಳಿಗೆ, ಭಜನಾ ಮಂಡಳಿಯವರಿಗೆ, ಸಾಮಾಜಿಕ ಸೇವಾ ಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ. ಯಾವುದೇ ಅಪೇಕ್ಷೆಯಿಲ್ಲದೆಯೇ ಇಂತಹ ಕಾರ್ಯಕ್ರಮಗಳು ನಡೆಯುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಸಿಂಧನೂರಿನ ಉಪ್ಪಾರವಾಡಿಯಲ್ಲಿರುವ ವಶಿಷ್ಠಧಾಮದಲ್ಲಿ ಅಧಿಕ ಮಾಸದ ಅಂಗವಾಗಿ ನಡೆದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ವಿವಿಧಕ್ಷೇತ್ರಗಳ ಸನ್ಮಾನ: ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಸಲ್ಲಿಸಿದ ಜ್ಞಾನಜ್ಯೋತಿ ಕಾಲೇಜಿನ ಪ್ರಾಚಾರ್ಯ ಎಸ್.ಪಿ.ವಿಷ್ಣುವರ್ಧನ ರೆಡ್ಡಿ ಹಾಗೂ ಅವರ ಪತ್ನಿ ಬಿ.ಸತ್ಯವತಿ, ಸಾಮಾಜಿಕ ಸೇವೆಯಲ್ಲಿ ತೊಡಗಿದ ಅಶೋಕ ನಲ್ಲ ಹಾಗೂ ಅವರ ಪತ್ನಿ ಊರ್ಮಿಳಾ ದಂಪತಿಗಳಿಗೆ, ಅಮೃತ್ ಬದಿ ಟ್ಯಾಟೋ ಕಲಾವಿದರು ಇವರಿಗೆ ವಶಿಷ್ಠಧಾಮ ಕಲಾರತ್ನ ಪ್ರಶಸ್ತಿ, ಜೀ.ಟೀವಿಯ ಗಾಯನ ಖ್ಯಾತಿಯ ಸ್ವರಾ ಜೋಶಿಗೆ ಬಾಲಸಂಗೀತ ರತ್ನ ಹಾಗೂ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ 2026 ಅವರ ಪ್ರಶಸ್ತಿ ಪಡೆದ ಕು.ಶ್ರೀರಕ್ಷ ಕುಲಕರ್ಣಿಗೆ ಬಾಲಪ್ರತಿಭೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಧಾರ್ಮಿಕ ಕಾರ್ಯಕ್ರಮಗಳನ್ನು ಭಾರದ್ವಾಜ ಉಪ್ಪಳ ನೆರವೇರಿಸಿದರು. ಪ್ರಶಾಂತ ಕುಲಕರ್ಣಿ ಸ್ವಾಗತಿಸಿದರು. ಪಾಂಡುರಂಗ ದೇಸಾಯಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ವೆಂಕಟೇಶಪ್ಪ, ಜಯತೀರ್ಥದಾಸ, ವೆಂಕಟೇಶ ಶೆಟ್ಟಿ ಕನ್ನಾರಿ, ಮಲ್ಕಾಪುರ ರಾಘವೇಂದ್ರ ಶೆಟ್ಟಿ, ವರದರಾಜ ಶೆಟ್ಟಿ, ಅರಳಹಳ್ಳಿ ಮಹಿಳಾ ಭಜನಾ ಮಂಡಳಿಯ ಈರಮ್ಮ ಪದ್ಮಾವತಿ, ಶೋಭಾ ನವಲಿ, ಲಕ್ಷ್ಮೀದೇವಿ, ಕಮಲಮ್ಮ ಭಾಗವಹಿಸಿದ್ದರು.

बैंक ऑफ़ बड़ौदा
Bank of Baroda
ಬ್ಯಾಂಕ್ ಆಫ್ ಬರೋಡಾ, ಲಿಂಗಸಗೂರು ಶಾಖೆ.
ಹೊಸ ಬಸ್ ನಿಲ್ದಾಣದ ಹತ್ತಿರ, ಗಂಭೀರ್ ಮಠ ಸಂಕೀರ್ಣ, ಕೆಇಬಿ ಪಕ್ಕ, ಲಿಂಗಸಗೂರು – 584122
ಇ.ಮೇಲ್: vjling@bankofbaroda.com ಮೊಬೈಲ್ – 6366533621

ವಾಹನಗಳ ಮಾರಾಟಕ್ಕಾಗಿ ಇ-ಹರಾಜಿನ ಸಂಕ್ಷಿಪ್ತ ಸಾರ್ವಜನಿಕ ಸೂಚನೆ

ಬ್ಯಾಂಕ್ ಆಫ್ ಬರೋಡ ಅಧಿಕೃತ ಅಧಿಕಾರಿಯು ಈ ಕೆಳಗಿನ ಹೈಪೋತಿಕೇಟೆಡ್ ವಾಹನಗಳನ್ನು ನೋಟೀಸ್‌ಗೆ ಅನುಸಾರವಾಗಿ ಈ ಕೆಳಗಿನ ಸಾಲ ಖಾತೆಗಳಲ್ಲಿ **"ಎಲ್ಲಿದೆಯೋ ಹಾಗೆ"** ಮತ್ತು **"ಹೇಗಿದಿಯೋ ಹಾಗೆ" "ಏನೇ ಇದ್ದರೂ"** ಮಾರಾಟ ಮಾಡುವ ಹಕ್ಕನ್ನು ಪಡೆದುಕೊಂಡಿದ್ದಾರೆ. "ಇಲ್ಲಿ ವಿವರಿಸಿದಂತೆ ಬ್ಯಾಂಕಿನ ಬಾಕಿ ಮತ್ತು ಬಡ್ಡಿಯ ಸಾಕ್ಷಾತ್ಕಾರಕ್ಕೆ ಆಧಾರವಾಗಿದೆ ಮತ್ತು ಬಾಕಿಗಳನ್ನು ಮರುಪಾವತಿಸಲು ವಿಫಲವಾದ ನಂತರ, ಸದರಿ ನೋಟೀಸ್ ಅಡಿಯಲ್ಲಿ ನೀಡಲಾದ ಅಧಿಕಾರದ ವ್ಯಾಯಾಮದಲ್ಲಿ ಕೆಳಗೆ ಸಹಿ ಮಾಡಿರುವುದು ಹೇಳಲಾದ ಮಾರಾಟದ ಮೂಲಕ ಬ್ಯಾಂಕ್‌ನ ಬಾಕಿಗಳನ್ನು ಸಾಧಿಸಲು ಪ್ರಸ್ತಾಪಿಸುತ್ತದೆ. ವೆಬ್‌ಸೈಟ್‌ನಲ್ಲಿ ಒದಗಿಸಲಾದ ಇ-ಹರಾಜು ವೇದಿಕೆಯ ಮೂಲಕ ಕೆಳಗೆ ಸಹಿ ಮಾಡಿದವರು ಮಾರಾಟವನ್ನು ಮಾಡುತ್ತಾರೆ.

ಕ್ರ ಸಂ	ಸಾಲಗಾರ/ರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ಒಟ್ಟು ಬಾಕಿಗಳು	ವಾಹನ ತಯಾರಿಕೆ ಮತ್ತು ಮಾದರಿ ಆರ್‌ಟಿಒ ನೋಂದಣಿ ಸಂಖ್ಯೆ	1.ಇ-ಹರಾಜಿನ ದಿನಾಂಕ ಇ-ಹರಾಜಿನ ಸಮಯ ಪ್ರಾರಂಭದ ಸಮಯ __ ರಿಂದ ಕೊನೆಯ ಸಮಯ 2. ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ. ____	1. ಮೀಸಲು ಬೆಲೆ- ರೂ. ___/- 2. ಅರ್ನೆಸ್ಟ್ ಮನಿ ಠೇವಣಿ (ಇಎಂಡಿ)- ರೂ.___/- 3. ಬಿಡ್ ಹೆಚ್ಚಳ ಮೊತ್ತ ರೂ.___/-	ಇಎಂಡಿ ಠೇವಣಿ ಖಾತೆ ಸಂಖ್ಯೆ......... ಐಎಫ್‌ಎಸ್‌ಸಿ ಕೋಡ್ .... ಬ್ಯಾಂಕ್ ಆಫ್ ಬರೋಡಾ ಶಾಖೆ	ವಾಹನ / ಚಲಿಸಬಲ್ಲ ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ
1	ಶ್ರೀ.ಶಿವರಾಜ್ ಬಿನ್ ಅಮರೇಶ್ 2/2/76, ವೆಂಕಟರಾಯನ ಪೇಟೆ, ಉಸ್ತಾದ್ ಗ್ಯಾರೇಜ್ ಹತ್ತಿರ, ಮುದ್ಗಲ್, ರಾಯಚೂರು ಜಿಲ್ಲೆ – 584125.	ರೂ. 9,03,221.92/– + ಬಡ್ಡಿ	A. Hyundai Venue 1.2 Petrol B. KA 05 NJ 0683	1. 06-07-2026 2.00PM to 5.00PM 2. 06-07-2026 up to 5.00PM	ಎ. ರೂ.6,50,000/– ಬಿ. ರೂ.65,000/– ಸಿ. ರೂ.10,000/–	63420015181219 IFSC Code: BARB0VJLING	29.06.2026 to 05.07.2026 3PM to 5PM (ಕೆಲಸದ ಸಮಯ)

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://baanknet.com ವೆಬ್‌ಸೈಟ್ ಲಿಂಕ್ ಅನ್ನು ನೋಡಿ/ಭೇಟಿ ನೀಡಿ. ಸಂಭಾವ್ಯ ಬಿಡ್ದಾರರು ಅಧಿಕೃತ ಅಧಿಕಾರಿಯನ್ನು ದೂರವಾಣಿ ಸಂಖ್ಯೆ: **ಲಿಂಗಸಗೂರು ಶಾಖೆ: 6366533621.** ಗೆ ಸಂಪರ್ಕಿಸಬಹುದು.

ಸ್ಥಳ: ಲಿಂಗಸಗೂರು
ದಿನಾಂಕ: 01.06.2026
ಸಹಿ/- ಅಧಿಕೃತ ಅಧಿಕಾರಿಗಳು
ಬ್ಯಾಂಕ್ ಆಫ್ ಬರೋಡ